# <u>ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>
# <u>ಕೆ.ಆರ್.ನಗರ</u>

**<u>ಓಎಸ್  125/2021</u>**

ಪಿ  ಡಬ್ಲ್ಯೂ-1

**<u>ದಿನಾಂಕ 30-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. ಮುಂದುವರೆದ ಪಾಟೀ ಸವಾಲು ಶ್ರೀ  ಎಮ್ ಸಿ ಕೆ ಪ್ರತಿವಾದಿ  1 ರಿಂದ 4 ರ ಪರ ವಕೀಲರುಃ</u>**

ನಾನು ಈ ದಾವೆಯನ್ನು 4 ಸ್ವತ್ತುಗಳಲ್ಲಿ  ವಿಭಾಗವನ್ನು  ಕೋರಿ ಸಲ್ಲಿಸಿದ್ದೇನೆ.  ಸದರಿ ದಾವಾ ಸ್ವತ್ತು ಪ್ರಸ್ತುತ ರಂಗೇಗೌಡ ಮತ್ತು ಕೃಷ್ಣೆಗೌಡ ಅವರುಗಳು ನಮ್ಮ 2 ಮತ್ತು 3 ನೇ ತಾತನ ಮಕ್ಕಳಾಗಿದ್ದು ಅವರ ಸ್ವಾಧೀನದಲ್ಲಿದೆ.  ಪ್ರತಿವಾದಿ 5 ಮತ್ತು 6 ರವರು 3 ನೇ ತಾತನ ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ 1 ನೇ ತಾತ ಗುಂಡೇಗೌಡ ಎಂದು ತಿಳಿಸಿರುತ್ತಾರೆ.

2.	ನಮ್ಮ ತಾತನಿಗೆ ಗುಂಡೇಗೌಡ ಮತ್ತು ಈರಯ್ಯ ಎಂಬ ಹಲವಾರು ಹೆಸರುಗಳಿಂದ ಕರೆಯುತ್ತಾರೆ. ಸದರಿ 2 ನೇ ತಾತನ ಹೆಸರು ಚಿಕ್ಕೇಗೌಡ. 3 ನೇ ತಾತನ ಹೆಸರು ಶೆಟ್ಟಿಗೌಡ. 1 ರಿಂದ 3 ನೇ ಪ್ರತಿವಾದಿಗಳು 2 ನೇ ತಾತ ಚಿಕ್ಕೇಗೌಡನ ಮಕ್ಕಳು.  4 ರಿಂದ 6  ರವರು 3 ನೇ ತಾತ ಶೆಟ್ಟಿಗೌಡರ ಮಕ್ಕಳು.

3.	ನಮ್ಮ 3 ಜನ ತಾತಂದಿರಿಗೆ  5 ಎಕರೆ 35 ಗುಂಟೆ  ಜಮೀನು ಇದೆ. ಸದರಿ ಜಮೀನು ಎಲ್ಲಾ ದಾವಾ ಸ್ವತ್ತುಗಳನ್ನು ಸೇರಿ 5 ಎಕರೆ 35 ಗುಂಟೇ ಜಮೀನು ಇರುತ್ತದೆ. ಸಾಲೀಗ್ರಾಮದ ಕರ್ಪೂರವಳ್ಳಿ ಗ್ರಾಮದಲ್ಲಿ ಒಟ್ಟು  ಸ ನಂ. 151 ರಲ್ಲಿ 6 ಎಕರೆ 24 ಗುಂಟೆ  ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ.

4.	ಸ ನಂ. 151/1, 151/3 ಬಿ, 151/3 ಸಿ ಒಟ್ಟು ಜಮೀನು 6 ಎಕರೆ 24  ಗುಂಟೇ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.  ಸದರಿ ಒಟ್ಟು 6 ಎಕರೆ 24 ಗುಂಟೆ ಜಮೀನಿನ ಪೈಕಿ ನಮ್ಮ 3 ಜನ ತಾತಂದಿರು  ತಲಾ 2 ಎಕರೇ 8 ಗುಂಟೆ ಜ ಮೀನನ್ನು ಮೌಖಿಕ ವಿಭಾಗದ ಮುಖಾಂತರ ಗ್ರಾಮಸ್ಥರ ಸಮಕ್ಷಮ ಹಂಚಿಕೊಂಡಿದ್ದಾರೆ ಎಂದರೆ  ಸರಿಯಲ್ಲ.

5. ಸದರಿ 2 ಎಕರೇ 8 ಗುಂಟೇ ಜಮೀನನ್ನು ನಮ್ಮ ತಂದೆ ಮತ್ತು ತಾತ ಎಲ್ಲರೂ ಸೇರಿ ರಾಚೇಗೌಡ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ ಹಾಗಾಗಿ ಸದರಿ ರಾಚೇಗೌಡರ ಹೆಸರಿನಲ್ಲಿ 2 ಎಕರೆ 8 ಗುಂಟೇ ಜಮೀನು ನಮೂದಾಗಿ ಅವರೇ ಸದರಿ ಸ್ವತ್ತಿನ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

6. ನಂತರ 3 ನೇ ತಾತ ಶೆಟ್ಟಿಗೌಡನ ಹಿಸ್ಸೆಗೆ ಬಂದ 2 ಎಕರೇ 8 ಗುಂಟೇ ಜಮೀನಿನ ಪೈಕಿ ಅವರ ಮಕ್ಕಳಾದ ಪ್ರತಿವಾದಿ 4 ರಿಂದ 6 ರವರು ವಿಭಾಗ ಮಾಡಿಕೊಂಡು ಷೆಡ್ಯೂಲ್ ಬಿ ಮತ್ತು ಡಿ ರಲ್ಲಿ ತೋರಿಸಿದಂತೆ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಉಳಿದ 2 ನೇ ತಾತ ಚಿಕ್ಕೇಗೌಡ ರವರ ಹಿಸ್ಸೆಗೆ ಬಂದ 2 ಎಕರೇ 8 ಗುಂಟೆ ಜಮೀನನ್ನು ಷೆಡ್ಯೂಲ್ ಸಿ ಸ್ವತ್ತಿನಲ್ಲಿ ತಿಳಿಸಿದ ಹಾಗೇ 1 ರಿಂದ 3 ನೇ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

7. ನಮಗೆ ಸೇರಿದ ಭಾಗವನ್ನು ಈಗಾಗಲೇ ನಮ್ಮ ತಂದೆ ಮತ್ತು ತಾತ ಮಾರಾಟ ಮಾಡಿದ್ದು ನಮಗೆ ಉಳಿದಿರುವ ಪ್ರತಿವಾದಿಗಳ ಜಮೀನಿನಲ್ಲಿ ಯಾವುದೇ ರೀತಿಯ ಭಾಗಾಂಶದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್‌ನ 1 ನೇ ಸ್ವತ್ತಿನಲ್ಲಿ ನಾನು ಸ್ವಾಧೀನದಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ